


ವಿಶ್ವಕಪ್ ಹಿಡಿದ ಭಾರತ ಕ್ರಿಕೆಟ್ ತಂಡ




# ‘ಜೀನಿ’ ಬೂಮ್ರಾ

ದಕ್ಷಿಣ ಆಫ್ರಿಕಾದ ಆಕ್ರಮಣಕಾರಿ ಬ್ಯಾಟ್ಸ್‌ಮನ್‌ಫಾಫ್ ಡುಪ್ಲೆಸಿ ಅವರ ಪ್ರಕಾರ ಜಸ್‌ಪ್ರೀತ್‌ಬೂಮ್ರಾ ತಂಡದ ನಾಯಕನ ಪಾಲಿಗೆ ಜೀನಿ ಇದ್ದಂತೆ. ಬೇಕೆಂದಾಗ ಚೆಂಡು ಹಿಡಿದು, ವಿಕೆಟ್‌ಗಳನ್ನು ಕಿತ್ತು ಕೊಡುವುದರಲ್ಲಿ ಅನುಮಾನವೇ ಇಲ್ಲ. ಅದನ್ನು ಈ ವಿಶ್ವಕಪ್‌ಟೂರ್ನಿಯಲ್ಲಿ ಅವರು ಮತ್ತೆ ಸಾಬೀತುಪಡಿಸಿದರು.

ಕೆಲವು ಪಂದ್ಯಗಳಲ್ಲಿ ಅವರು ಪ್ರತಿ ಓವರ್‌ಗೆ 10 ರನ್‌ಕೊಟ್ಟ ಉದಾಹರಣೆಗಳಿವೆಯಾದರೂ, ಆಮೇಲೆ ಅವರು ಚೇತರಿಸಿಕೊಂಡ ಪರಿ ಎಂಥವರಿಗೂ ಪಾಠ. ಪ್ರತಿ ಓವರ್‌ಗೆ ಅವರು 8 ಪಂದ್ಯಗಳಿಂದ ನೀಡಿದ್ದು ಕೇವಲ 6.21 ರನ್! ಚುಟುಕು ಕ್ರಿಕೆಟ್‌ನಲ್ಲಿ ಇದನ್ನು ಸಾಧಿಸುವುದು ತಮಾಷೆಯಲ್ಲ. 2018ರಲ್ಲಿ ಒಂದು ದಿಕ್ಕಿಗೆ ಮಾತ್ರ ಸ್ವಿಂಗ್ ಮಾಡುತ್ತಿದ್ದ ಅವರು ಈಗ ಎರಡೂ ದಿಕ್ಕಿಗೆ ಸ್ವಿಂಗ್ ಮಾಡುತ್ತಾರೆ. ಅವರ ಯಾರ್ಕರ್‌ಗಳಂತೂ ಕರಾರುವಾಕ್! ಇಂಗ್ಲೆಂಡ್‌ನ ಮೈಕಲ್ ವಾನ್ ಹೇಳುವಂತೆ, ಕಳೆದ ಐದು ದಶಕಗಳಲ್ಲೇ ವಿಶ್ವದ ಅತಿ ಶ್ರೇಷ್ಠ ಬೌಲರ್ ಬೂಮ್ರಾ! ಫೈನಲ್‌ಪಂದ್ಯದಲ್ಲಿ ನಾಲ್ಕು ವಿಕೆಟ್ ಪಡೆದ ಅವರು ಅದನ್ನು ಸಾಬೀತುಪಡಿಸಿದ್ದೂ ಆಯಿತು.

ಸ್ಪಿನ್ ವಿಭಾಗದಲ್ಲಿ ವರುಣ್ ಚಕ್ರವರ್ತಿ ಈ ಬಾರಿ ದಂಡನೆಗೆ ಒಳಗಾದರಾದರೂ ಅಂತಿಮವಾಗಿ ಅತಿ ಹೆಚ್ಚು ವಿಕೆಟ್‌ಪಡೆದವರ ಪಟ್ಟಿಯಲ್ಲಿ ಅವರು ಎರಡನೆಯವರಾಗಿರುವುದು ಆಸಕ್ತಿಕರ ವಿದ್ಯಮಾನ.